

ಅರ್ಥ ಇರಬಹುದೇ? ಇನ್ನು 'ಕರ'?

'ಸರ್, ಮೂರು ಕೋಣೆಗಳಲ್ಲಿ ಒಟ್ಟು ಆರು ಮೇಲ್ವಿಚಾರಕರು ಇದ್ದಾರೆ. ಹನ್ನೊಂದರ ಹೊತ್ತಿಗೆ ಕಾಫಿ ಕಳುಹಿಸಬೇಕು' ತಾತ್ಕಾಲಿಕವಾಗಿ ನನ್ನ ಸಹಾಯಕ್ಕೆ ನಿಯುಕ್ತನಾಗಿದ್ದ ನಾಗರಾಜ ಹೇಳಿದ.

'ಹಾಗೇ ಮಾಡಿ' ಎಂದೆ.

'ಸರಿ ಸರ್' ಎನ್ನುತ್ತ 'ಶಂಕರ, ಒಂದು ನಿಮಿಷ ಬನ್ನಿ' ಎಂದ.

'ಪರೀಕ್ಷೆ ಕೋಣೆಗಳಲ್ಲಿ ಆರು ಮಂದಿ, ಸಾಹೇಬರು, ನಾನು ಮತ್ತೆ ನಿನಗೂ ಸೇರಿಸಿ ಕಾಫಿ ತನ್ನಿ, ಫ್ಲಾಸ್ಕ್‌ಗಳು ಇವೆ ತಾನೇ?' ಎನ್ನುತ್ತಾ ಚೀಟಿಯಲ್ಲಿ ಬರೆದು ಕಳುಹಿಸಿದ.

'ಮೆಸ್ ಮ್ಯಾನೇಜರ್ ಒಟ್ಟಿಗೆ ಬಿಲ್ ಮಾಡ್ತೀನಿ ಅಂದಿದ್ದಾರೆ, ಅದನ್ನೇ ಪಾಸ್ ಮಾಡಿ ಸಂದಾಯ ಮಾಡಿದರೆ ಆಯಿತು ಸರ್' ಎಂದ. ನಾನು ತಲೆಯಾಡಿಸಿದೆ.

ಶಂಕರ... ಹೆಸರಲ್ಲಿ 'ಕರ' ಇದೆ, ಅಂದರೆ ನಕಲು ಮಾಡುವ ಅಭ್ಯರ್ಥಿಯ ಹೆಸರಿನಲ್ಲಿ ಈ ಕರ ಇರಬಹುದೆ?

ತಕ್ಷಣ ಏನೋ ಹೊಳೆದಂತಾಗಿ 'ರೀ ನಾಗರಾಜ್, ಇಲ್ಲಿ ಪರೀಕ್ಷೆ ಬರೆಯುತ್ತಿರುವ ಅಭ್ಯರ್ಥಿಗಳ ಲಿಸ್ಟ್ ಇದ್ದರೆ ಕೊಡಿ' ಎಂದೆ.

'ಕೊಟ್ಟೆ ಸರ್, ಒಂದೆರಡು ಸೆಟ್ ಎಕ್ಸ್ಟ್ರಾ ಇದೆ' ಎನ್ನುತ್ತ, ಒಂದು ಸೆಟ್ ಕೊಟ್ಟ.

ಪೇಜಿಗೆ 25 ಹೆಸರುಗಳು, ಒಟ್ಟು ಆರು ಪುಟಗಳು, ಕೊನೆಯ ಪುಟದಲ್ಲಿ 11 ಹೆಸರುಗಳು; ಒಟ್ಟಾರೆ 136 ಅಭ್ಯರ್ಥಿಗಳು.

ಮೊದಲಿಗೆ 'ಕರ'ದಿಂದ ಕೊನೆಯಾಗುವ ಹೆಸರುಗಳನ್ನು ಗುರುತು ಹಾಕಿಕೊಳ್ಳತೊಡಗಿದೆ. ದಿನಕರ,